

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ.

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 14–12–2018 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಹಝ್ರತ್ ಮುಸ್‌ತಹ್ ಬಿನ್ ಅಸಾಸ(ರ) ಎಂಬ ಸಹಾಬಿಯ ಬಗ್ಗೆ ಪ್ರಸ್ತಾಪಿಸುವೆನು. ಅವರ ಹೆಸರು ಔಫ್ ಎಂದಾಗಿತ್ತು. ಆದರೆ ಮುಸ್‌ತಹ್ ಎಂಬ ಹೆಸರಿಲ್ಲಿ ಪ್ರಸಿದ್ಧಿ ಗಳಿಸಿದರು. ಅವರ ತಾಯಿ ಹಝ್ರತ್ ಉಮ್ಮು ಮುಸ್‌ತಹ್ ಸಲ್ಮಾ ಬಿನ್ ಸಖ್ರ್, ಹಝ್ರತ್ ಅಬೂಬಕರ್ ರಝಿಯಲ್ಲಾಹು ಅನ್‌ಹುರವರ ಚಿಕ್ಕಮ್ಮ ರೀತಾ ಬಿನ್ತ್ ಸಖ್ರ್ ರವರ ಪುತ್ರಿಯಾಗಿದ್ದರು. ಹಝ್ರತ್ ಮುಸ್‌ತಹ್ ಬದರ್ ಸಮೇತ ಎಲ್ಲಾ ಯುದ್ಧಗಳಲ್ಲಿ ಭಾಗವಹಿಸಿದ್ದರು. ಮದೀನಕ್ಕೆ ಹಿಜ್‌ರತ್ ಮಾಡಿ ಎಂಟು ತಿಂಗಳು ದಾಟಿ ಹೋದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಬೈದ ಬಿನ್ ಹಾರಿಸ್‌ರನ್ನು ಅರುವತ್ತು, ಇನ್ನೊಂದು ವರದಿ ಪ್ರಕಾರ ಎಂಭತ್ತು ಸವಾರರ ಜೊತೆಗೆ ಕಳುಹಿಸಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಉಬೈದ ಬಿನ್ ಹಾರಿಸ್‌ಗೋಸ್ಕರ ಒಂದು ಬಿಳಿ ಬಣ್ಣದ ಪತಾಕೆ ಕಟ್ಟಿದಾಗ ಅದನ್ನು ಮುಸ್‌ತಹ್ ಬಿನ್ ಅಸಾಸ ಎತ್ತಿಹಿಡಿದರು. ಈ ಸೈನಿಕರ ತಂಡದ ಉದ್ದೇಶ ಖುರೈಶಿಗಳ ವ್ಯಾಪಾರದ ಸಂಘವನ್ನು ಮಾರ್ಗದಲ್ಲಿ ತಡೆಯುವುದಾಗಿತ್ತು. ಖುರೈಶಿಗಳ ನಾಯಕ ಅಬೂ ಸುಫ್‌ಯಾನ್ ಆಗಿದ್ದರು. ಖುರೈಶಿಗಳ ತಂಡದಲ್ಲಿ ಇನ್ನೂರು ಜನರಿದ್ದರು. ಸಹಾಬರು ರಾಬಿಖ್ ಕಣಿವೆಯಲ್ಲಿ ಆ ತಂಡವನ್ನು ತಲಪಿದರು. ಖುರೈಶಿಗಳ ತಂಡ ಕೇವಲ ವ್ಯಾಪಾರಿಗಳದ್ದಾಗಿರಲಿಲ್ಲ. ಅವರು ಆಯುಧಗಳನ್ನು ಧರಿಸಿದವರಾಗಿದ್ದರು. ಆ ವ್ಯಾಪಾರದಿಂದ ಸಿಗುವ ಲಾಭವನ್ನು ಮುಸ್ಲಿಮರ ವಿರುದ್ಧ ಯುದ್ಧಮಾಡಲು ಬಳಸುವ ಉದ್ದೇಶವನ್ನು ಅವರು ಹೊಂದಿದ್ದರು. ಅವರು ಪೂರ್ಣವಾಗಿ ಯುದ್ಧ ಸನ್ನದ್ಧರಾಗಿದ್ದರು ಎಂದು ಮುಂದಿನ ಘಟನೆಗಳಿಂದ ತಿಳಿಯುತ್ತದೆ. ಸಹಾಬರು ಖುರೈಶಿಗಳ ಎದುರಿಗೆ ಹೋದಾಗ ಬಾಣ ಹೂಡುವಿಕೆ ಹೊರತು ಬೇರೆ ರೀತಿಯ ಹೋರಾಟವೇನೂ ನಡೆಯಲಿಲ್ಲ. ಆ ಸಂದರ್ಭದಲ್ಲಿ ಮೊದಲೇ ಮುಸ್ಲಿಮರಾಗಿದ್ದ ಹಝ್ರತ್ ಮಿಖ್‌ದಾದ್ ಬಿನ್ ಅಸ್‌ವದ್ ಮತ್ತು ಹಝ್ರತ್ ಐಯೀನ ಬಿನ್ ಗಝ್ವಾನ್ ಬಹುದೇವಾರಾಧಕರ ತಂಡದಿಂದ ಹೊರಗೆ ಬಂದು ಮುಸ್ಲಿಮರೊಂದಿಗೆ ಸೇರಿದರು. ಬಹುದೇವಾರಾಧಕರಿಗೆ ಮುಸ್ಲಿಮರ ಬಗ್ಗೆ ಭಯವುಂಟಾಗಿ ಅವರು ಹಿಂದೆ ಸರಿದು ಹೋದರು. ಮುಸ್ಲಿಮರು ಅವರನ್ನು ಬೆನ್ನಟ್ಟಲಿಲ್ಲ. ಏಕೆಂದರೆ ಮುಸ್ಲಿಮರು ಯುದ್ಧ ಮಾಡುವ ಉದ್ದೇಶ ಹೊಂದಿರಲಿಲ್ಲ. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಖೈಬರ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ಮುಸ್‌ತಹ್ ಮತ್ತು ಇಬ್ನು ಇಲ್‌ಯಾಸರಿಗೆ ಐವತ್ತು ವಸಖ್ ಧಾನ್ಯ ನೀಡಿದರು. ಹಝ್ರತ್ ಮುಸ್‌ತಹ್ 56ನೇ ವಯಸ್ಸಿನಲ್ಲಿ ಹಿಜರಿ 34ರಲ್ಲಿ ಹಝ್ರತ್ ಉಸ್ಮಾನ್(ರ)ರ ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು. ಅವರು ಹಝ್ರತ್ ಅಲಿಯವರ(ರ) ಖಿಲಾಫತ್ ಕಾಲದಲ್ಲಿಯೂ ಜೀವಿಸಿದ್ದರು ಮತ್ತು ಹಝ್ರತ್ ಅಲಿಯವರೊಂದಿಗೆ ಸಿಫ್ಫೀನ್ ಯುದ್ಧದಲ್ಲಿ ಭಾಗವಹಿಸಿದ್ದರು. ಹಾಗೂ ಹಿಜರಿ 37ರಲ್ಲಿ ನಿಧನ ಹೊಂದಿದರು ಎಂದು ಸಹ ಹೇಳಲಾಗುತ್ತದೆ.

ಹಝ್ರತ್ ಮುಸ್‌ತಹ್(ರ)ರಿಗೆ ಹಝ್ರತ್ ಅಬೂಬಕರ್(ರ)ರವರು ಖರ್ಚುವೆಚ್ಚದ ವ್ಯವಸ್ಥೆ ಮಾಡಿದ್ದರು. ಆದರೆ ಹಝ್ರತ್ ಆಯಿಶ(ರ)ರವರ ವಿರುದ್ಧ ಅಪವಾದ ಪ್ರಚಾರ ಮಾಡಿದವರಲ್ಲಿ ಹಝ್ರತ್ ಮುಸ್‌ತಹ್ ಸಹ ಸೇರಿದ್ದರು. ಆಗ ಹಝ್ರತ್ ಅಬೂಬಕರ್(ರ) ಆಣೆಹಾಕಿ ಹೇಳಿದರು ಇನ್ನು ಮುಂದೆ ಅವರ ಸಂರಕ್ಷಣೆ ಮಾಡಲಾರೆನೆಂದು. ಆ ಸಂದರ್ಭದಲ್ಲಿ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನ ಅವತೀರ್ಣವಾಯಿತು:

وَلَا يَأْتَلِ أُولُو الْفَضْلِ مِنكُمْ وَالسَّعَةِ أَن يُؤْتُوا أُولِي الْقُرْبَىٰ وَالْمَسَاكِينَ وَالْمُهَاجِرِينَ فِي سَبِيلِ اللَّهِ ۖ وَلْيَعْفُوا وَلْيَصْفَحُوا ۗ أَلَا تُحِبُّونَ أَن يَغْفِرَ اللَّهُ لَكُمْ ۗ وَاللَّهُ غَفُورٌ رَّحِيمٌ

**ವಲಾ ಯಅ್‌ತಲಿ ಉಲುಲ್ ಫಝ್‌ಲಿ ಮಿನ್‌ಕುಮ್ ವಸ್ಸಅತಿ ಅನ್ ಯುಅ್‌ತೂ ಉಲಿಲ್ ಖುರ್‌ಬಾ ವಲ್ ಮಸಾಕೀನ ವಲ್ ಮುಹಾಜಿರೀನ ಫೀ ಸಬೀಲಿಲ್ಲಾಹಿ ವಲ್ ಯಅ್‌ಫೂ ವಲ್ ಯಸ್‌ಫಹೂ ಅಲಾ ತುಹಿಬ್ಬೂನ ಅನ್‌ಯಗ್‌ಫಿರಲ್ಲಾಹು ಲಕುಮ್ ವಲ್ಲಾಹು ಗಫೂರುರ್ರಹೀಮ್.**

ನಿಮ್ಮ ಪೈಕಿ (ಧಾರ್ಮಿಕವಾಗಿಯೂ ಭೌತಿಕವಾಗಿಯೂ) ಉನ್ನತ ಸ್ಥಾನದಲ್ಲಿರುವವರು ಮತ್ತು ಐಶ್ವರ್ಯವಂತರು ತಮ್ಮ ನಿಕಟ ಸಂಬಂಧಿಕರಿಗೂ ನಿರ್ಗತಿಕರಿಗೂ ಅಲ್ಲಾಹನ ಮಾರ್ಗದಲ್ಲಿ ವಲಸೆ ಹೋದವರಿಗೂ ಏನನ್ನೂ ನೀಡೆವು ಎಂದು ಪ್ರತಿಜ್ಞೆ ಮಾಡಬಾರದು. ಅವರು ಕ್ಷಮಿಸಲಿ ಮತ್ತು ಸೈರಿಸಿಕೊಳ್ಳಲಿ. ಅಲ್ಲಾಹನು ನಿಮಗೆ ಕ್ಷಮೆ ನೀಡಬೇಕೆಂದು ನೀವು ಬಯಸುವುದಿಲ್ಲವೇ? ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯನಿಧಿಯೂ ಅಗಿದ್ದಾನೆ. (24: 23).

ಪವಿತ್ರ ಖುರ್‌ಆನಿನ ಈ ವಚನದ ಅವತೀರ್ಣವಾದ ನಂತರ ಹಝ್ರತ್ ಅಬೂಬಕರ್(ರ) ಪುನಃ ಹಝ್ರತ್ ಮುಸ್‌ತಹ್‌ರಿಗೆ ಖರ್ಚು ವೆಚ್ಚ ನೀಡತೊಡಗಿದರು. ನಂತರ ಹಝ್ರತ್ ಆಯಿಶ(ರ)ರವರು ನಿರ್ದೋಷಿ ಎಂದು ಅಲ್ಲಾಹನು ಸಂದೇಶವಾಣಿ ಮೂಲಕ ತಿಳಿಸಿದಾಗ ಸುಳ್ಳು ಆರೋಪ ಮಾಡಿದವರಿಗೆಲ್ಲಾ ಶಿಕ್ಷೆ ಸಹ ನೀಡಲಾಯಿತು. ಕೆಲವು ವರದಿಗಳ ಪ್ರಕಾರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಆಯಿಶರ ಮೇಲೆ ಅಪವಾದ ಪ್ರಚಾರ ಮಾಡಿದವರಿಗೆ ಚಾಟಿ ಏಟಿನ ಶಿಕ್ಷೆ ವಿಧಿಸಿದವರಲ್ಲಿ ಹಝ್ರತ್ ಮುಸ್‌ತಹ್ ಸಹ ಸೇರಿದ್ದರು.

ಬುಖಾರಿಯ ವರದಿ ಪ್ರಕಾರ ಹಝ್ರತ್ ಆಯಿಶ(ರ) ತನ್ನ ವಿರುದ್ಧ ಸುಳ್ಳು ಅಪವಾದ ಹೊರಿಸಿದ ಸಂದರ್ಭದ ಬಗ್ಗೆ ಹೀಗೆ ವಿವರಿಸುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಆಕ್ರಮಣಕ್ಕೆ ಹೊರಟಾಗ ತನ್ನ ಜೊತೆಗೆ ಯಾವ ಪತ್ನಿ ಇರಬೇಕೆಂಬ ಬಗ್ಗೆ ಚೀಟಿ ಎತ್ತಿದಾಗ ನನ್ನ ಹೆಸರು ಬಂದುದರಿಂದ ನಾನು ಅವರ ಜೊತೆಗೆ ಹೋದೆ. ಆಗ ಪರದೆ ಧರಿಸುವ ಆಜ್ಞೆ ಅದರ ಮೊದಲೇ ಅವತೀರ್ಣವಾಗಿತ್ತು. ನನ್ನನ್ನು ಪಲ್ಲಕಿಯಲ್ಲಿ ಕುಳ್ಳಿರಿಸಿ ಒಂಟೆಯ ಮೇಲಿರಿಸಿ ಪಲ್ಲಕಿ ಸಮೇತ ಇಳಿಸಲಾಗುತ್ತಿತ್ತು. ನಾವು ಆ ರೀತಿ ಪ್ರಯಾಣ ಮಾಡುತ್ತಿದ್ದೆವು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಆಕ್ರಮಣ ಕೊನೆಗೊಳಿಸಿ ಮರಳಿ ಬಂದಾಗ ನಾವು ಮದೀನದ ಸಮೀಪ ಶಿಬಿರ ಹೂಡಿದ್ದೆವು. ಒಂದು ರಾತ್ರಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಶಿಬಿರದಿಂದ ಹೊರಡಲು ಆಜ್ಞೆ ನೀಡಿದರು. ಆ ಸಮಯದಲ್ಲಿ ನಾನು ಬಹಿರ್ದೆಸೆಗೆ ಹೋಗಿದ್ದೆ. ನಾನು ಮರಳಿ ಬಂದಾಗ ನನ್ನ ಹಾರ ಬಿದ್ದು ಹೋದುದಾಗಿ ತಿಳಿಯಿತು. ನಾನು ನನ್ನ ಹಾರವನ್ನು ಹುಡುಕಲು ಮರಳಿ ಹೋದೆನು. ಆಗ ಸ್ವಲ್ಪ ತಡವಾಯಿತು. ಆಗ ನನ್ನ ಒಂಟೆಯನ್ನು ಪ್ರಯಾಣಕ್ಕೆ ಸಿದ್ಧಪಡಿಸುವವರು ನನ್ನ ಪಲ್ಲಕಿಯನ್ನು ಒಂಟೆಯ ಮೇಲಿರಿಸಿದರು. ಅದು ಬರಿದಾಗಿದ್ದರೂ ಅದರಲ್ಲಿ ನಾನಿದ್ದೇನೆ ಎಂದು ಅವರು ಭಾವಿಸಿದರು. ಏಕೆಂದರೆ ಆಗ ನಾನು ತೆಳುವಾದ ದೇಹ ಹೊಂದಿದ್ದೆನು. ಅವರು ಒಂಟೆಯನ್ನು ಚಲಾಯಿಸುತ್ತಾ ಮುಂದೆ ಸಾಗಿದರು. ಸೈನ್ಯವೆಲ್ಲ ಅಲ್ಲಿಂದ ಹೊರಟಿತು. ನಾನು ನನ್ನ ಹಾರವನ್ನು ಹುಡುಕಿ ತೆಗೆದು ಡೇರೆಗಳನ್ನು ಹಾಕಿದ್ದ ಕಡೆಗೆ ಮರಳಿದಾಗ ಅಲ್ಲಿ ಯಾರೂ ಇರಲಿಲ್ಲ. ಅನಂತರ ನಾನು ಮೊದಲು ತಂಗಿದ್ದ ಡೇರೆಯ ಕಡೆಗೆ ಹೋದೆ. ನನ್ನನ್ನು ಹುಡುಕಲು ಜನರು ಅಲ್ಲಿಗೆ ಬರುವರೆಂದು ನಾನು ಯೋಚಿಸಿದೆ. ನಾನು ಡೇರೆಯಲ್ಲಿ ಕುಳಿತಿದ್ದಾಗ ನನಗೆ ತೂಕಡಿಕೆ ಬಂದು ನಾನು ನಿದ್ರಿಸಿದೆ. ಸಫ್ವಾನ್ ಬಿನ್ ಮುಅತಲ್ ಸಲ್ಮಾ ಝುಕ್ವಾನಿ ಸೈನ್ಯದ ಹಿಂದೆ ಇರುತ್ತಿದ್ದರು. ಏನಾದರೂ ಬಾಕಿಯಾಗಿ ಉಳಿದಿದೆಯೋ ಎಂದು ನೋಡುವುದು ಅವರ ಕೆಲಸವಾಗಿತ್ತು. ಅವರು ಬೆಳಗ್ಗೆ ನನ್ನ ಡೇರೆಗೆ ಬಂದರು. ಡೇರೆಯೊಳಗೆ ಮಲಗಿರುವ ಒಬ್ಬರನ್ನು ಕಂಡು ಅವರು ಇನ್ನಾಲಿಲ್ಲಾಹಿ ಪಠಿಸಿದರು. ಅವರು ಇನ್ನಾಲಿಲ್ಲಾಹಿ ಪಠಿಸಿದಾಗ ನನಗೆ ಎಚ್ಚರವಾಯಿತು. ಅವರು ತಮ್ಮ ಒಂಟೆಯನ್ನು ನನ್ನ ಸಮೀಪಕ್ಕೆ ತಂದರು. ಒಂಟೆಯನ್ನು ಕುಳಿತುಕೊಳ್ಳುವಂತೆ ಮಾಡಿದಾಗ ನಾನು ಒಂಟೆಯನ್ನೇರಿದೆ. ಅವರು ಒಂಟೆಯ ಕಡಿವಾಣ ಹಿಡಿದು ಮುಂದೆ ಸಾಗಿದರು. ನಾವು ಸೈನ್ಯದ ಸಮೀಪಕ್ಕೆ ತಲಪಿದಾಗ ಮಧ್ಯಾಹ್ನವಾಗಿತ್ತು. ಎಲ್ಲರೂ ವಿಶ್ರಾಂತಿ ಪಡೆಯಲು ಡೇರೆಗಳಲ್ಲಿ ಇದ್ದರು. ಅನಂತರ ನಾಶವಾಗಲಿದ್ದವರು ನಾಶವಾದರು. ಎಂದರೆ ಕೆಲವರು ಈ ಘಟನೆ ಬಗ್ಗೆ ಅಪವಾದ ಪ್ರಚಾರ ಮಾಡಲು ತೊಡಗಿದರು.

ಈ ಸುಳ್ಳು ಪ್ರಚಾರ ಪ್ರಾರಂಭಿಸಿದವನು ಅಬ್ದುಲ್ಲಾ ಬಿನ್ ಉಬೈ ಬಿನ್ ಸುಲೂಲ್ ಆಗಿದ್ದನು. ನಾವು ಮದೀನ ತಲಪಿದೆವು. ನಾನು ಒಂದು ತಿಂಗಳ ಕಾಲ ರೋಗಿಯಾಗಿದ್ದೆ. ಸುಳ್ಳು ಅಪವಾದದ ಬಗ್ಗೆ ಜನರು ಚರ್ಚಿಸುತ್ತಿದ್ದರು. ನಾನು ರೋಗಿಯಾಗಿದ್ದಾಗ ನನಗೆ ಸಂಶಯಕರವಾಗಿ ತೋರಿದುದು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ರೋಗಾವಸ್ಥೆಯಲ್ಲಿ ಹಿಂದೆ ತೋರಿಸುತ್ತಿದ್ದ ಸಹಾನುಭೂತಿ ಈಗ ತೋರಿಸುತ್ತಿರಲಿಲ್ಲ ಎಂಬುದಾಗಿದೆ. ಅವರು ಒಳಗೆ ಬಂದು ಅಸ್ಸಲಾಮು ಅಲೈಕುಮ್ ಹೇಳುತ್ತಿದ್ದರು. ಮತ್ತು ಯಾರದಾದರೂ ಮೂಲಕ ನನ್ನ ರೋಗದ ಸ್ಥಿತಿ ಬಗ್ಗೆ ವಿಚಾರಿಸುತ್ತಿದ್ದರು. ನನಗೆ ಆಗ ಈ ಸುಳ್ಳು ಅಪವಾದದ ಬಗ್ಗೆ ತಿಳಿದಿರಲಿಲ್ಲ. ಒಂದು ರಾತ್ರಿ ನಾನು ಮತ್ತು ಉಮ್ಮು ಮುಸ್‌ತಹ್ ಬಿನ್ತ್ ಅಬೀ ರಹಮ್ ಒಟ್ಟಿಗೆ ಹೋಗುತ್ತಿದ್ದಾಗ ಆಕೆಯ ಪರದೆಯು ಕಾಲಿಗೆ ಸಿಲುಕಿ ಆಕೆ ಮುಗ್ಗರಿಸಿ ಬಿದ್ದರು. ಆಗ ಆಕೆ ಹೇಳಿದರು: ಮುಸ್‌ತಹ್ ದುರದೃಷ್ಟಶಾಲಿಯಾಗಲಿ. ನಾನು ಹೇಳಿದೆ: ನೀವು ಎಷ್ಟು ಕೆಟ್ಟ ಮಾತು ಆಡಿದಿರಿ. ಬದರ್ ಯುದ್ಧದಲ್ಲಿ ಭಾಗವಹಿಸಿದ ವ್ಯಕ್ತಿಯ ಬಗ್ಗೆ ಇಂತಹ ಕೆಟ್ಟ ಮಾತು ಹೇಳುತ್ತಿರುವಿರಿ. ಆಗ ಆಕೆ ಹೇಳಿದರು: ಹೇ ಮುಗ್ಧ ಹುಡುಗಿ, ಜನರು ಸುಳ್ಳು ಅಪವಾದ ಹೊರಿಸಿದ್ದನ್ನು ನೀನು ಕೇಳಿಲ್ಲವೇ? ಆಕೆ ಸುಳ್ಳು ಆರೋಪ ಮಾಡುವವರ ವಿಷಯ ತಿಳಿಸಿ 'ನಿನ್ನ ಮೇಲೆ ಇಂತಹ ಆರೋಪ ಮಾಡಲಾಗುತ್ತಿದೆ' ಎಂದು ಹೇಳಿದರು. ನಾನು ರೋಗ ಬಾಧೆಯಿಂದ ಆಗ ತಾನೆ ಮುಕ್ತಳಾಗಿದ್ದೆ. ಆಕೆಯ ಮಾತು ಆಲಿಸಿ ನನ್ನ ರೋಗ ವರ್ಧಿಸಿತು. ನಾನು ಮನೆಗೆ ಮರಳಿದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನ ಬಳಿ ಬಂದು ಈಗ ನೀನು ಹೇಗಿರುವೆ ಎಂದು ವಿಚಾರಿಸಿದರು. ನಾನು ಹೇಳಿದೆ: ನನ್ನ ತಂದೆ ತಾಯಂದಿರ ಬಳಿಗೆ ಹೋಗಲು ನನಗೆ ಅನುಮತಿ ನೀಡಿರಿ. ಅವರು ನನಗೆ ಅನುಮತಿ ನೀಡಿದರು. ನಾನು ನನ್ನ ತಂದೆ ತಾಯಂದಿರ ಬಳಿಗೆ ಹೋದಾಗ ತಾಯಿಯೊಂದಿಗೆ ವಿಚಾರಿಸಿದೆ ಜನರು ಏನೆಲ್ಲಾ ಹೇಳುತ್ತಿದ್ದಾರೆ ಎಂದು. ನನ್ನ ತಾಯಿ ಹೇಳಿದರು: ನೀನು ಈ ಮಾತಿನ ಬಗ್ಗೆ ಕೊರಗುತ್ತಾ ನಿನ್ನ ಜೀವಕ್ಕೆ ಹಾನಿ ಉಂಟುಮಾಡಬೇಡ. ಅಲ್ಲಾಹನಾಣೆ! ಒಬ್ಬನಿಗೆ ಸುಂದರಿಯಾದ ಪತ್ನಿ ಇದ್ದು ಮತ್ತು ಅವನು ಅವಳನ್ನು ಪ್ರೀತಿಸುತ್ತಲೂ ಇದ್ದು, ಮಾತ್ರವಲ್ಲ ಅವನಿಗೆ ಬೇರೆ ಪತ್ನಿಯರೂ ಇರುವುದಾದರೆ, ಅಂತಹ ಸಂದರ್ಭದಲ್ಲಿ ಆ ಸುಂದರಿ ಪತ್ನಿ ವಿರುದ್ಧ ಜನರು ಮಾತನಾಡದೆ ಇರುವುದೇ ಬಹಳ ಕಡಿಮೆ.

ಹಝ್ರತ್ ಆಯಿಶಾ(ರ) ಹೇಳುತ್ತಾರೆ: ನಾನು ಆ ರಾತ್ರಿ ಇಡೀ ಅಳುತ್ತಾ ಇದ್ದೆ. ನಾನು ಆ ರಾತ್ರಿ ನಿದ್ರಿಸಲಿಲ್ಲ. ನಾನು ಬೆಳಗ್ಗೆ ಎದ್ದಾಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅಲೀ ಬಿನ್ ಅಬೀ ತಾಲಿಬ್ ಮತ್ತು ಉಸಾಮ ಬಿನ್ ಝೈದರನ್ನು ಕರೆಯಿಸಿ ಅವರೊಂದಿಗೆ ನನ್ನ ಕುರಿತು ಸಲಹೆ ಕೇಳಿದರು. ಉಸಾಮ ಹೇಳಿದರು: ಅಲ್ಲಾಹನ ಸಂದೇಶವಾಹಕರೇ, ಆಯಿಶ ನಿಮ್ಮ ಪತ್ನಿಯಾಗಿದ್ದಾರೆ. ಅಲ್ಲಾಹನಾಣೆ ನಾವು ಅವರಲ್ಲಿ ಒಳಿತನ್ನೇ ಕಂಡಿದ್ದೇವೆ. ಯಾವ ನ್ಯೂನತೆಯನ್ನೂ ಕಾಣಲಿಲ್ಲ. ಆದರೆ ಅಲೀ ಬಿನ್ ಅಬೀ ತಾಲಿಬ್ ಹೇಳಿದರು: ಅಲ್ಲಾಹನ ಸಂದೇಶವಾಹಕರೇ, ಅಲ್ಲಾಹನು ತಮಗೆ ಯಾವ ಕೊರತೆಯನ್ನೂ ಉಂಟುಮಾಡಿಲ್ಲ. ಆಕೆಯ ಹೊರತು ಬೇರೆ ಅನೇಕ ಪತ್ನಿಯರೂ ತಮಗಿದ್ದಾರೆ.

ಅಲೀ ಹೀಗೆ ಸಹ ಹೇಳಿದರು: ಆಯಿಶರವರ ಸೇವಕಿಯೊಂದಿಗೆ ಆಕೆಯ ಕುರಿತು ವಿಚಾರಿಸಿರಿ. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಬರೀರಳನ್ನು ಕರೆದು ಕೇಳಿದರು: ನೀನು ಅವರಲ್ಲಿ ಎಂದರೆ ಹಝ್ರತ್ ಆಯಿಶ ಅವರಲ್ಲಿ ನಿನಗೆ ಸಂಶಯಕರವಾಗಿ ತೋರುವ ಏನನ್ನಾದರೂ ನೋಡಿರುವಿಯೋ? ಬರೀರ ಹೇಳಿದಳು: ಖಂಡಿತವಾಗಿ ಏನನ್ನೂ ನೋಡಿಲ್ಲ. ನಿಮಗೆ ಸತ್ಯವನ್ನು ನೀಡಿ ಕಳುಹಿಸಿದ ಅಲ್ಲಾಹನಾಣೆ ನಾನು ಹಝ್ರತ್ ಆಯಿಶರಲ್ಲಿ ಯಾವ ನ್ಯೂನತೆಯನ್ನೂ ಕಂಡಿಲ್ಲ.

ಬರೀರ ಹೇಳಿದ ಮಾತನ್ನು ಆಲಿಸಿದ ನಂತರ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹಾಬರೊಂದಿಗೆ ಹೇಳಿದರು: ನನ್ನ ಪತ್ನಿಗೆ ಸಂಬಂಧಿಸಿ ನನಗೆ ದುಃಖ ನೀಡಿದವನನ್ನು ಯಾರು ನೋಡಿಕೊಳ್ಳುವರು. ನಾನು ಅಲ್ಲಾಹನ ಹೆಸರಲ್ಲಿ ಆಣೆ ಹಾಕಿ ಹೇಳುತ್ತೇನೆ. ನನ್ನ ಪತ್ನಿಯಲ್ಲಿ ಒಳಿತಿನ ಹೊರತು ಬೇರೇನೂ ನಾನು ಕಂಡಿಲ್ಲ. ಆಗ ಹಝ್ರತ್ ಸಅದ್ ಬಿನ್ ಮುಆಝ್ ಎದ್ದು ನಿಂತು ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ ಅಲ್ಲಾಹನಾಣೆ ನಾನು ನಿಮ್ಮ ಪರವಾಗಿ ಈ ದೋಷಾರೋಪ ಹೊರಿಸಿದವನ ಮೇಲೆ ಪ್ರತೀಕಾರ ಮಾಡುವೆನು. ಅವನು ಔಸ್ ಗೋತ್ರದವನಾಗಿದ್ದರೆ ನಾನು ಅವನ ಕತ್ತನ್ನು ಕತ್ತರಿಸಿ ಬಿಡುವೆನು. ಅವನು ನಮ್ಮ ಸಹೋದರರಾದ ಖಝ್ರಜ್ ಗೋತ್ರದವನಾಗಿದ್ದರೆ ನೀವು ಏನು ಆಜ್ಞೆ ನೀಡುವಿರೋ ಅದನ್ನು ಕೃತಿರೂಪಕ್ಕೆ ತರುವೆನು. ಆಗ ಖಝ್ರಜ್ ಗೋತ್ರದ ಸಅದ್ ಬಿನ್ ಉಬಾದ ಎದ್ದು ನಿಂತು ಹೇಳಿದರು: ನೀವು ಹೇಳಿದುದು ತಪ್ಪು. ಅಲ್ಲಾಹನಾಣೆ ನೀವು ಅವನನ್ನು ಕೊಲ್ಲಲಾರಿರಿ ಮತ್ತು ಕೊಲ್ಲಲು ನಿಮಗೆ ಸಾಧ್ಯವೂ ಆಗಲಾರದು. ಆಗ ಆ ಎರಡು ಗೋತ್ರಗಳಿಗೆ ಸೇರಿದ ಜನರು ರೊಚ್ಚಿಗೆದ್ದು ಜಗಳ ಮಾಡಲು ಪ್ರಾರಂಭಿಸಿದರು. ಆಗ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅವರ ರೋಷವನ್ನು ತಂಪುಗೊಳಿಸಿದರು. ಆಗ ಅವರು ಸುಮ್ಮನಾದರು.

ಹಝ್ರತ್ ಆಯಿಶ ಹೇಳುತ್ತಾರೆ: ನಾನು ಇಡೀ ದಿನ ಅಳುತ್ತಾ ಇದ್ದೆ. ನನ್ನ ಕಣ್ಣೀರು ನಿಲ್ಲುತ್ತಿರಲಿಲ್ಲ. ನನಗೆ ನಿದ್ರೆ ಬರುತ್ತಿರಲಿಲ್ಲ. ನನ್ನ ತಂದೆ ತಾಯಂದಿರು ನನ್ನ ಸಮೀಪಕ್ಕೆ ಬಂದರು. ಆಗ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮ್ಮ ಮನೆಯೊಳಗೆ ಬಂದು ಕುಳಿತುಕೊಂಡರು. ನನ್ನ ಮೇಲೆ ಅಪವಾದ ಪ್ರಚಾರವಾದ ನಂತರ ಅವರು ನನ್ನ ಬಳಿ ಕುಳಿತುಕೊಂಡಿರಲಿಲ್ಲ. ಅವರು ಒಂದು ತಿಂಗಳು ಕಾಯುತ್ತಾ ಇದ್ದರೂ ಅವರಿಗೆ ನನ್ನ ಕುರಿತು ಅಲ್ಲಾಹನ ಸಂದೇಶವಾಣಿ ಲಭಿಸಲಿಲ್ಲ.

ಹಝ್ರತ್ ಆಯಿಶಾ(ರ) ಹೇಳುತ್ತಾರೆ: ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಶಹಾದತ್ ಕಲಿಮ ಉಚ್ಚರಿಸಿ ಹೇಳಿದರು. ಆಯಿಶ ನನ್ನ ಬಳಿಗೆ ನಿನ್ನ ಬಗ್ಗೆ ಈ ಮಾತು ತಲಪಿದೆ. ನೀನು ನಿರ್ದೋಷಿಯಾಗಿದ್ದರೆ ಅಲ್ಲಾಹನು ನಿಶ್ಚಯವಾಗಿಯೂ ನೀನು ನಿರ್ದೋಷಿ ಎಂದು ಪ್ರಕಟಿಸುವನು. ನಿನ್ನಿಂದ ಏನಾದರೂ ಬಲಹೀನತೆ ಸಂಭವಿಸಿದ್ದರೆ ಅಲ್ಲಾಹನಿಂದ ಕ್ಷಮೆಯನ್ನು ಯಾಚಿಸು. ಅವನ ಮುಂದೆ ತೌಬ ಮಾಡು. ಏಕೆಂದರೆ ದಾಸನು ತಾನು ಮಾಡಿದ ಪಾಪವನ್ನು ನಿವೇದಿಸಿ ತೌಬ ಮಾಡಿದರೆ ಅಲ್ಲಾಹನು ಅವನ ಮೇಲೆ ದಯೆದೋರುತ್ತಾನೆ.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತನ್ನ ಮಾತು ಮುಗಿಸಿದಾಗ ನಾನು ನನ್ನ ತಂದೆಯೊಂದಿಗೆ ಹೇಳಿದೆ: ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ನನ್ನ ಪರವಾಗಿ ಉತ್ತರ ನೀಡಿರಿ. ಅವರು ಹೇಳಿದರು: ಅಲ್ಲಾಹನಾಣೆ, ಅಲ್ಲಾಹನ ಸಂದೇಶವಾಹಕರೊಂದಿಗೆ ಏನು ಹೇಳಬೇಕೆಂದು ನನಗೆ ತಿಳಿಯುವುದಿಲ್ಲ. ಅನಂತರ ನಾನು ನನ್ನ ತಾಯಿಯೊಂದಿಗೆ ಅದೇ ಮಾತು ಹೇಳಿದಾಗ ಅವರು ಸಹ ನನ್ನ ತಂದೆಯವರು ನೀಡಿದ ಉತ್ತರವನ್ನೇ ನೀಡಿದರು. ನಾನು ಹಝ್ರತ್ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಹೇಳಿದೆ: ನಾನು ನಿರ್ದೋಷಿ ಎಂದು ಹೇಳುವುದಾದರೆ ಮತ್ತು ವಾಸ್ತವಿಕವಾಗಿ ನಾನು ನಿರ್ದೋಷಿಯಾಗಿರುವೆನು ಎಂದು ಅಲ್ಲಾಹನಿಗೆ ತಿಳಿದಿದೆ ಎಂದು ಹೇಳಿದರೆ ನೀವು ನನ್ನನ್ನು ಸತ್ಯ ಹೇಳುತ್ತಿರುವೆನೆಂದು ಭಾವಿಸಲಾರಿರಿ. ನಾನು ಯಾವುದಾದರೂ ವಿಷಯದ ಬಗ್ಗೆ ಪ್ರತಿಜ್ಞೆ ಮಾಡಿದರೆ ಮತ್ತು ವಾಸ್ತವಿಕವಾಗಿ ನಾನು ನಿರ್ದೋಷಿ ಎಂದು ಅಲ್ಲಾಹನಿಗೆ ತಿಳಿದಿದ್ದರೆ ನೀವು ನನ್ನ ಪ್ರತಿಜ್ಞೆಯನ್ನು ಸತ್ಯವೆಂದು ಅಂಗೀಕರಿಸುವಿರಿ. ಅಲ್ಲಾಹನಾಣೆ ನನ್ನ ಮತ್ತು ನಿಮ್ಮ ಮಧ್ಯೆ ಇರುವ ಉದಾಹರಣೆ ಹಝ್ರತ್ ಯೂಸುಫ್ ಅಲೈಹಿಸ್ಸಲಾಮರ ತಂದೆಯ ಉದಾಹರಣೆಯಂತಿದೆ. ಯೂಸುಫರ ಪಿತ ಹೇಳಿದ್ದರು: ಸಹನೆ ದೋರುವುದೇ ಉತ್ತಮ. ಅಲ್ಲಾಹನಿಂದಲೇ ಸಹಾಯವನ್ನು ಯಾಚಿಸಬೇಕು.

ಅನಂತರ ನಾನು ಬದಿಗೆ ಸರಿದು ನನ್ನ ಹಾಸಿಗೆಗೆ ಬಂದೆ. ಅಲ್ಲಾಹನು ನಾನು ನಿರ್ದೋಷಿ ಎಂದು ಪ್ರಕಟಿಸುವನೆಂಬ ಭರವಸೆ ನಾನು ಹೊಂದಿದ್ದೆನು. ಅಲ್ಲಾಹನಾಣೆ, ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕುಳಿತಿದ್ದ ಸ್ಥಳದಿಂದ ಎದ್ದೇಳುವ ಮೊದಲೇ ಅವರಿಗೆ ಅಲ್ಲಾಹನ ವಹೀ ಅವತೀರ್ಣವಾಯಿತು. ಅವರಿಗೆ ವಹೀ ಲಭಿಸಿದ ಸ್ಥಿತಿ ಕೊನೆಗೊಂಡಾಗ ಅವರು ಮುಗುಳು ನಗುತ್ತಿದ್ದರು. ಅನಂತರ ಅವರು ಪ್ರಥಮವಾಗಿ ಹೇಳಿದ ಮಾತು: ಆಯಿಶ, ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸು, ಏಕೆಂದರೆ ಅವನು ನಿನ್ನನ್ನು ದೋಷಮುಕ್ತೆಯನ್ನಾಗಿ ಮಾಡಿರುವನು. ಆಗ ನನ್ನ ತಾಯಿ ನನ್ನೊಡನೆ ಹೇಳಿದರು: ಎದ್ದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಮೀಪಕ್ಕೆ ಹೋಗು. ನಾನು ಹೇಳಿದೆ, ಖಂಡಿತವಾಗಿಯೂ ನಾನು ಎದ್ದು ಅವರ ಬಳಿಗೆ ಹೋಗುವುದಿಲ್ಲ ಮತ್ತು ಅಲ್ಲಾಹನ ಹೊರತು ಬೇರೆ ಯಾರಿಗೂ ನಾನು ಕೃತಜ್ಞತೆ ಅರ್ಪಿಸುವುದೂ ಇಲ್ಲ. ಅಲ್ಲಾಹನು ವಹೀ ಮೂಲಕ ತಿಳಿಸಿದ್ದನು, ಸುಳ್ಳು ಅಪವಾದ ಮಾಡಿದುದು ನಿಮ್ಮ ಪೈಕಿ ಒಂದು ಗುಂಪಾಗಿತ್ತು ಎಂದು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಸೀರತ್ ಖಾತಮುನ್ನಬಿಯ್ಯೀನ್ ಎಂಬ ತನ್ನ ಗ್ರಂಥದಲ್ಲಿ ಈ ಘಟನೆ ವಿವರಿಸಿ ಇದರ ಬಗ್ಗೆ ಒಂದು ವಿಷಯ ಹೆಚ್ಚುವರಿಯಾಗಿ ಹೀಗೆ ಹೇಳಿದ್ದಾರೆ: ಬುಖಾರಿಯಲ್ಲಿ ಹೀಗೆ ವರದಿಯಾಗಿದೆ: ಹಝ್ರತ್ ಆಯಿಶ ಹೇಳಿದರು, ಕೈಯ

ಮೇಲೆ ಕಾಲಿಟ್ಟು ಒಂಟೆಯನ್ನೇರಿದೆ ಎಂದು. ಆದರೆ ಈ ಪುಸ್ತಕದಲ್ಲಿ ಬರೆದಿರುವುದು ಒಂಟೆಯ ಮುಂಗಾಲುಗಳ ಮೊಣಕಾಲಿನ ಮೇಲೆ ಕಾಲಿಟ್ಟು ಒಂಟೆಯ ಮೇಲೇರಿದೆ. ಏಕೆಂದರೆ ಒಂಟೆ ದಿಢೀರೆಂದು ಎದ್ದೇಳದಿರಲಿ ಎಂಬ ಉದ್ದೇಶದಿಂದ.

ಹಝ್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಗೆ ಸಂಬಂಧಿಸಿ ಹೇಳಿದ ಬೇರೆ ಕೆಲವು ವಿಷಯಗಳನ್ನು ನಿಮ್ಮ ಮುಂದಿರಿಸುತ್ತೇನೆ. ಅವರು ಬರೆಯುತ್ತಾರೆ: ಹಝ್ರತ್ ಆಯಿಶರವರ ವಿರುದ್ಧ ಪ್ರಚಾರ ಎಷ್ಟು ವರ್ಧಿಸಿತ್ತೆಂದರೆ ಕೆಲವು ಸಹಾಬರು ಸಹ ತಿಳಿಗೇಡಿತನದಿಂದ ಅಪವಾದ ಮಾಡುವವರ ಜೊತೆ ಸೇರಿದ್ದರು. ಅವರಲ್ಲೊಬ್ಬರು ಹಸ್ಸಾನ್ ಬಿನ್ ಸಾಬಿತ್ ಆಗಿದ್ದರು. ಇನ್ನೊಬ್ಬ ಮುಸ್‌ತಹ್ ಬಿನ್ ಅಸಾಸ. ಒಬ್ಬ ಸಹಾಬಿಯ ಹಮ್ನ ಬಿನ್ತ್ ಜಹ್‌ಶ್ ಸಹ ಅವರೊಂದಿಗೆ ಸೇರಿದ್ದರು. ಆಕೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಾದಿನಿಯಾಗಿದ್ದರು. ಹಝ್ರತ್ ಆಯಿಶ ರಝಿಯಲ್ಲಾಹು ಅನ್‌ಹರಿಗೆ ಈ ದುರ್ಘಟನೆಯಿಂದ ಬಹಳ ದುಃಖವಾಗಿತ್ತು. ಅವರು ಈ ದುಃಖದ ಕಾರಣ ರೋಗಿಯಾದರು. ಅವರಿಗೆ ಕಪಟವಿಶ್ವಾಸಿಗಳ ಪ್ರಚಾರದ ಬಗ್ಗೆ ತಿಳಿದಾಗ ಅವರ ರೋಗ ವರ್ಧಿಸಿತು.

ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಖುತ್‌ಬದಲ್ಲಿ ಹೀಗೆ ಹೇಳಿದರು: ಹಝ್ರತ್ ಆಯಿಶ ವಿರುದ್ಧ ಅಪವಾದ ಪ್ರಚಾರ ಮಾಡಿದುದಕ್ಕೆ ಮೂರು ಜನರಿಗೆ ಚಾಟಿ ಏಟಿನ ಶಿಕ್ಷೆ ನೀಡಲಾಗಿತ್ತು. ಅವರಲ್ಲೊಬ್ಬ ಹಸ್ಸಾನ್ ಬಿನ್ ಸಾಬಿತ್, ಇನ್ನೊಬ್ಬ ಹಝ್ರತ್ ಅಬೂಬಕರ್‌ರವರ ಚಿಕ್ಕಮ್ಮನ ಮಗ ಮುಸ್‌ತಹ್. ಮೂರನೆಯದು ಒಬ್ಬ ಮಹಿಳೆ. ಈ ಮೂವರಿಗೂ ಶಿಕ್ಷೆ ನೀಡಲಾಯಿತು. ಸುನನ್ ಅಬೀದಾಊದ್‌ನಲ್ಲಿ ಸಹ ಈ ಶಿಕ್ಷೆಯ ಬಗ್ಗೆ ವಿವರಿಸಲಾಗಿದೆ. ಕೆಲವರ ಅಭಿಪ್ರಾಯ ಈ ಶಿಕ್ಷೆ ನೀಡಲಾಯಿತು ಎಂದು. ಬೇರೆ ಕೆಲವರು ಶಿಕ್ಷೆ ನೀಡಿಲ್ಲ ಎಂದು ಸಹ ಹೇಳುತ್ತಾರೆ. ಅವರು ಬದರೀ ಸಹಾಬರಾಗಿದ್ದರು. ಅಲ್ಲಾಹನು ಅವರನ್ನು ಕ್ಷಮಿಸಿದನು. ಬದರೀ ಸಹಾಬರಿಗೆ ಉನ್ನತ ಸ್ಥಾನವಿತ್ತು. ಅಲ್ಲಾಹನು ಅವರ ಅಂತಿಮ ಗತಿಯನ್ನು ಶುಭಕರವಾಗಿ ಮಾಡಿದನು ಮತ್ತು ಅವರ ಸ್ಥಾನವನ್ನು ನೆಲೆ ನಿಲ್ಲಿಸಿದನು. ಅಲ್ಲಾಹನು ಅವರ ಪದವಿಗಳನ್ನು ಉನ್ನತ ಪಡಿಸುತ್ತಾ ಇರಲಿ – ಆಮೀನ್.

*****

***Friday Sermon delivered by Hadrath Khaleefatul Masih Al Khamis***(atba)

*At,Masjid Baithul Futhuh London, UK. On 14-12-2018.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon